

ಈ ಮುಟ್ಟಾಟವನ್ನು ಅಜ್ಜಿ ಬೆರಗಿನಿಂದ ನೋಡಿ ಕೆಂಪಾಗುತ್ತಿದ್ದ ಸೂರ್ಯನನ್ನು ಮತ್ತೆ ಮತ್ತೆ ನೋಡಿತು.

ಪಕೋಡದ ಪರಿಮಳ ಅಜ್ಜಿಯ ಮೂಗನ್ನರಳಿಸಿತು. ತುಡುಗಿನಿಂದ ಅಜ್ಜಿ ಅಡುಗೆಮನೆ ಕಡೆಗೆ ಬಂದಳು. ಮೊಮ್ಮಗಳೂ ಹೆಜ್ಜೆಯ ಮೇಲೊಂದ್ ಹೆಜ್ಜೆಯನ್ನಿಕ್ಕುತ ಬಂದಳು. ಮೂಗು ಪಕೋಡದ ಪರಿಮಳವನ್ನು ಹೀರಿ ಆಸ್ವಾದಿಸಿ, ಮುಖದಲ್ಲಿ ಆತುರ ಆನಂದವನ್ನು, ಕಣ್ಣಲ್ಲಿ ಆಸೆಯನ್ನು, ನಾಲಿಗೆಯ ಬದಿಯಲ್ಲಿ ಜೊಲ್ಲುರಸವನ್ನು ತುಂಬಿಕೊಂಡು, ಪಕ್ಕದಲ್ಲಿದ್ದ ಏಣಿ ಮೆಟ್ಟಲನ್ನ ಹಿಡಿದುಕೊಂಡು ನಿಧಾನವಾಗಿ ಕೂತಳು. ಮತ್ತೊಂದು ಸುಸ್ಕಾರ ತೆಗೆದಳು. ಹಣೆಯಲ್ಲಿ ಮುತ್ತಿನಂಥ ಬೆವರ ಹನಿಗಳು ಕಾಣಿಸಿದವು. ಅಜ್ಜಿಯಂತೂ ಮೊಮ್ಮಗಳನ್ನು ನೋಡಿ, ‘ಜೋಪಾನ’ ಎಂದು ಕೂಗಿಕೊಂಡಿತು. ಸೂರ್ಯ ಹಿಂದು ಹಿಂದಕ್ಕೆ ಸರಿಯುತ್ತ ಬಿಸಿಲನ್ನ ಬಂಗಾರದ ನೀರಲ್ಲಿ ಅದ್ದಿ ತೆಗೆಯುತ್ತಿದ್ದ. ಪಕೋಡದ ಬಣ್ಣ ಸಹ ಸೂರ್ಯನ ಬಂಗಾರದ ಬಿಸಿಲ ಬಣ್ಣಕ್ಕೆ ಸರಿಗಟ್ಟಿ ನಗಾಡತೊಡಗಿತು.

ಜಾನಕಿ ತಟ್ಟೆಯಲ್ಲಿದ್ದ ಬಿಸಿ ಪಕೋಡವನ್ನು ಮುರಿದು ಬಾಯಿಗೆ ಹಾಕಿಕೊಂಡು, ನಾಲಿಗೆಗೆ ಬಿಸಿ ತಾಗಿ ಹಾ ಹಾ ಎಂದು ಅಲ್ಲೇ ಹೊರಳಿಸಿ, ಹಲ್ಲಿಗೊಂದಿಷ್ಟು ಬಿಸಿ ತಾಗಿಸಿ ಜಗಿಯುತ್ತ ಸುಖಪಟ್ಟಳು. ಅಜ್ಜಿಗೆ ಮೊಮ್ಮಗಳ ಮುಖ ನೋಡಿ ಆನಂದವಾಯಿತು. ನಂತರ ಸಂಕಟವೂ ಆಯಿತು. ಯಾಕೆಂದರೆ ಆಕೆ, ಆಕೆಯ ಪತಿದೇವರಾದ ಶಾಮಣ್ಣ ಕಾಶಿಯಾತ್ರೆಗೆ ಹೋಗಿದ್ದರು. ಕಾಶಿಯಲ್ಲಿ ತಮಗೆ ಪ್ರಿಯವಾದ ತಿನಿಸನ್ನು ಬಿಡಬೇಕಷ್ಟೆ. ಅಲ್ಲಿನ ಪುರೋಹಿತರು ‘ನಿಮಗೇನು ಆಸೆ?’ ಎಂದು ತುಂಗಕ್ಕನನ್ನು ಕೇಳಿದರು. ತುಂಗಕ್ಕನಿಗೆ ಏನು ಹೇಳಬೇಕೆಂದೇ ತಿಳಿಯಲಿಲ್ಲ.

ಇಡೀ ಭೂಮಂಡಲದಲ್ಲಿನ ಎಲ್ಲ ತಿಂಡಿ–ತಿನಿಸುಗಳೂ ಆಕೆಯ ಕಣ್ಣ ಮುಂದೆ ಮೆರವಣಿಗೆ ಹೊರಟವು. ‘ಮಾಯಾ ಬಜಾರ್’ ಸಿನಿಮಾ ಜ್ಞಾಪಕವಾಗಿ ಅಲ್ಲಿನ ಮದುವೆ ಮನೆಯಲ್ಲಿ ಅಡುಗೆಮನೆಯಲ್ಲಿಟ್ಟ ವಿವಿಧ ಖಾದ್ಯಗಳು, ಲಾಡು ಉಂಡೆ, ಚಿರೋಟಿ, ಚಕ್ಕುಲಿ ಎಲ್ಲ ನೆನಪಾದವು. ಘಟೋತ್ಕಜನ ಬಾಯಿಗೆ ತಟ್ಟೆಯಿಂದ ನೇರವಾಗಿ ಲಾಡು ಉಂಡೆ ನುಗ್ಗುವ ಸೀನು ನೆನಪಾಯಿತು. ಆ ಎಂದು ಬಾಯಿ ತೆರೆದುಕೊಂಡು ಕೂತಿದ್ದ ಪತ್ನಿಯನ್ನ ನೋಡಿದ ಶಾಮಣ್ಣ, ‘ಅವಳಿಗೆ ಪಕೋಡ ಎಂದರೆ ತುಂಬಾ ಇಷ್ಟ’ ಎಂದು ಅಗಲವಾಗಿ ನುಡಿದರು. ಅಲ್ಲಿಗೆ ತುಂಗಕ್ಕನ ಪಕೋಡದ ಋಣ ಮುಗಿಯಿತು! ಅದು ಈಗ ಮರಳಿ ನೆನಪಾಗಿ, ‘ಗಂಡನೆಂಬೋ ಗಂಡ ಹಾಳು ಮುಂಡೆಗಂಡ ಎಂಥ ಕೆಲಸ ಮಾಡ್ದ’ ಎಂದು ನೂರಾರು ಸಲ ಬೈದುಕೊಂಡಿದ್ದಕ್ಕೆ ಈ ದಿನದ ಬೈಗುಳವನ್ನು ಸೇರಿಸಿತು.

ರಾಜಾರಾಯರು ಮಹಡಿಯಿಂದ ಕೆಳಗಿಳಿದು ಬಂದರು. ಮುಖ ತೊಳೆದು ಅಡುಗೆ ಮನೆಗೆ ಬಂದರು. ನೆರೆಮನೆಯ ರಾಜೀಬಾಯಿ ‘ಏನೇ ತುಂಗಿ ಹೆಂಗಿದಿಯೇ... ನೆನ್ನೆ ಕೋಡ್ಬಳೆ ಮಾಡಿದ್ದೆ. ಮಗ ಊರಿಗೆ ಹೋದ್ನಲ್ಲ ಅದಕ್ಕೆ. ತಗ ಬಾಯಿಗೆ ಹಾಕ್ಕ’ ಎಂದು ಕೋಡುಬಳೆಯ ಪೊಟ್ಟಣವನ್ನ ತುಂಗಕ್ಕನ ಕೈಗೊಪ್ಪಿಸಿತು. ಅದರಲ್ಲಿದ್ದ ಕೋಡುಬಳೆಯ ಇಂಗಿನ ವಾಸನೆ ಜಾನಕಿಯನ್ನ ಬಿಡಲಿಲ್ಲ!

ಅಜ್ಜಿ ಮೊಮ್ಮಗಳಿಗೆ ಕೋಡುಬಳೆ ಕೊಡುತ್ತ, ‘ನೀ ತಿನ್ನು ಪುಟ್ಟ, ರಾಜಿಮನೆ ಕೋಡುಬಳೆ ತಿಂದೇ ನಿನ್ನ ಮಗ ಹೊರಬರಲಿ’ ಎಂದು ಬೊಚ್ಚು ಬಾಯಿ ತೆಗೆದು ಅಗಲವಾಗಿ ತುಂಗಜ್ಜಿ ನಕ್ಕಿತು.

ಇವೆಲ್ಲವನ್ನು ನೋಡಿ ಹೊಟ್ಟೆಕಿಚ್ಚುಪಟ್ಟ ಸೂರ್ಯ ಬಲು ಬೇಗ ಮುಳುಗಿದ!

ಪ್ರತಿಕ್ರಿಯಿಸಿ: feedback@sudha.co.in

## ನಕ್ಕುಬಿಡಿ

ಮಗ ಎಂಜಿನಿಯರಿಂಗ್ ಪದವಿ ಮುಗಿಸಿ ಮನೆಗೆ ಬರುವಾಗ ಒಂದು ಹುಡುಗಿಯನ್ನು ಕರೆದುಕೊಂಡು ಬಂದಿದ್ದ.

**ಅಪ್ಪ:** ಯಾರೋ ಇವಳು, ಇಲ್ಲಿಗೆ ಯಾಕೆ ಕರೆದುಕೊಂಡು ಬಂದಿದೆಯಾ?

**ಮಗ:** ಅಪ್ಪಾ ಇದು ಕ್ಯಾಂಪಸ್ ಸೆಲೆಕ್ಷನ್!

***

**ಖಾಸಗಿ ಶಾಲಾ ವಿದ್ಯಾರ್ಥಿ:** ನನ್ನ ಶಾಲೆಗೆ ಕರೆದುಕೊಂಡು ಹೋಗಲು ನಮ್ಮ ಮನೆ ಮುಂದೇನೆ ಸ್ಕೂಲ್ ಬಸ್ ಬರುತ್ತೆ ಗೊತ್ತಾ?

**ಸರ್ಕಾರಿ ಶಾಲಾ ವಿದ್ಯಾರ್ಥಿ:** ಏನು ಮಹಾ ಬಿಡು, ನನ್ನ ಕರೆದುಕೊಂಡು ಹೋಗಲು ಸ್ವತಃ ನಮ್ ಹೆಡ್ ಮಾಸ್ಟರ್ ನಮ್ ಮನೆ ಬಾಗಿಲ ಹತ್ರಾನೇ ಬರ್ತಾರೆ ಗೊತ್ತಾ?

***

**ಕನಕ:** ಸೀರಿಯಲ್ ಹೆಸರು ನೋಡ್ರಿ ‘ಬೀಡಿ ಸೇದಿ ಬಂದ’ ಅಂತೆ. ಥೇ, ಅಸಹ್ಯ ಏನು ಹೆಸರೋ...

**ಕಿಟ್ಟಿ:** ಲೇ.. ಲೇ ಕನ್ನಡ ಸರಿಯಾಗಿ ಓದು, ಅದು ‘ಬಿಡಿಸದ ಬಂಧ’ ಅಂತ ಕಣೇ.

***

**ಚಿಕ್ಕಣ್ಣ:** ದೇವರಿಗೆ ಸಾಂಬಾರ್ ಸೇವೆ ಮಾಡಿಸುತ್ತೇನೆ ಅಂತ ವಿಚಿತ್ರ ಹರಕೆ ಹೊತ್ತು ಕೊಂಡಿದ್ದೀಯಾ?

**ಬೋರಣ್ಣ:** ಓ ಅದಾ, ನಮ್ ಅತ್ತೆ ‘ವಡೆ ಹಾರ ಸೇವೆ’ ಮಾಡಿಸುತ್ತೇನೆ ಅಂತ ಹರಕೆ ಹೊತ್ತು ಕೊಂಡಿದ್ದಾರೆ. ಹರಕೆ ತೀರಿಸಿದ ಮೇಲೆ ಎಲ್ಲಾ ನಮಗೇ ತಾನೇ, ವಡೆ ಸಾಂಬಾರ್ ಒಳ್ಳೆಯ ಕಾಂಬಿನೇಶನ್ ಅಲ್ವೇ?

***

**ಪೊಲೀಸ್:** ಈ ನಡುರಾತ್ರಿಯಲ್ಲಿ ಒಬ್ಬನೇ ಎಲ್ಲಿಗೆ ಹೋಗ್ತಾ ಇದೀಯಾ?

**ಗುಂಡ:** (ಕುಡಿದು ಟೈಟ್ ಆಗಿದ್ದ) ಕುಡಿತದ ಬಗ್ಗೆ ಭಾಷಣ ಕೇಳೋಕೆ

**ಪೊಲೀಸ್:** ಎಲಾ ಇವನಾ, ಅದ್ಯಾರೋ ಇಷ್ಟು ಹೊತ್ತಲ್ಲಿ ಭಾಷಣ ಮಾಡೋರು?

**ಗುಂಡ:** ಇನ್ಯಾರು, ನನ್ ಹೆಂಡ್ತಿ ಸುಬ್ಬಿ! ನಮ್ ಮನೆಬಾಗಿಲ ಬಳಿ.

***

**ಪುಂಡ:** ಆ ರೌಡಿ ಶೀಟರ್ ಕರಿಯ ನನ್ನ ಮಗಳನ್ನ ಕಿಡ್ನ್ಯಾಪ್ ಮಾಡಿ ಮದುವೆ ಮಾಡಿಕೊಂಡಿದ್ದೂ ಅಲ್ಲದೆ ಈಗ ಬೀಗರ ಊಟಕ್ಕೆ ಬನ್ನಿ ಅಂತ ಕರೆಯೋಕೆ ಬಂದಿದ್ದ, ಎಂಥಾ ಪೊಗರು.

**ಗುಂಡ:** ಹೌದಾ, ಎಷ್ಟು ಕೊಬ್ಬು ಹೋಗ್ಲಿ ಬಿಡು, ಅಂದ ಹಾಗೆ ನೀನು ಏನು ಮಾಡಿದೆ?

**ಪುಂಡ:** ಹಾ ಹಾ ಬಿಡ್ತೀನಾ ನಾನು, ಸುಬ್ಬಿನ್ನೂ ಕರೆದುಕೊಂಡು ಹೋಗಿ ಊಟ ಮಾಡಿಕೊಂಡೇ ಬಂದೆವು.

■ **ಆರ್. ವೀರೇಶ್‌ಕುಮಾರ್**